ಓ.ಎಸ್.56/2023 ಪಿ.ಡಬ್ಲು-1
ಬಸಲಿಂಗಮ್ಮ

ದಿ.16-12-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

*ಮುಖ್ಯ ವಿಚಾರಣೆ: ಶ್ರೀ. ವಿ.ಪಿ.ಎಸ್.ಜೆ ವಕೀಲರಿಂದ :-*

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಯಲಾಗಿರುವ ಎಲ್ಲಾ ಅಂಶಗಳು ನನಗೆ ತಿಳಿದಿದ್ದು ಸತ್ಯಾಂಶಗಳಿಂದ ಕೂಡಿರುತ್ತವೆ. ನಾನು ಓದಿ ತಿಳಿದುಕೊಂಡು ಸಹಿ ಮಾಡಿದ್ದೇನೆ.

2. ದಾವೆಗೆ ಸಂಬಂಧಿಸಿದಂತೆ ಮನೆ ನಂ.176 ರ ಚೆಕ್ಕಬಂದಿ ಪ್ರಮಾಣ ಪತ್ರ ಹಾಜರು ಪಡಿಸಿದ್ದು ಅದನ್ನು ನಿ.ಪಿ-1 ಎಂದು, ಹಿರಿಯ ನಾಗರಿಕ ರಕ್ಷಣಾ ನ್ಯಾಯ ಮಂಡಳಿಯ ಆದೇಶದ ಪ್ರತಿಯನ್ನು ನಿ.ಪಿ-2 ಎಂದು, ಎಮ್.ಆರ್.ನಂ.31 ರ ದೃಡಿಕೃತ ಪ್ರತಿಯನ್ನು ನಿ.ಪಿ-3 ಎಂದು, ಸರ್ವೆ ನಂ.17/ಅ ಮತ್ತು 41 ರ ಪಹಣಿ ಪತ್ರಿಕೆಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ನಿ.ಪಿ-4 ಮತ್ತು 5 ಎಂದು, ಎಮ್.ಆರ್.ನಂ.20 ಮತ್ತು 12 ರ ದೃಡಿಕೃತ ಪ್ರತಿಗಳನ್ನು ನಿ.ಪಿ-6 ಮತ್ತು 7 ಎಂದು ಗುರುತಿಸಲಾಯಿತು. ಸರ್ವೆ ನಂ.41 ಕ್ಕೆ ಸಂಬಂಧಿಸಿದಂತೆ 1973-1974 ರಿಂದ 1998-1999 ರ ಒಟ್ಟು 5 ಉತಾರಗಳನ್ನು ಹಾಜರು ಪಡಿಸಿದ್ದು ಅವುಗಳನ್ನೆಲ್ಲಾ ನಿ.ಪಿ-8 ಎಂದು ಗುರುತಿಸಲಾಯಿತು. ಸರ್ವೆ ನಂ.17/ಅ ಕ್ಕೆ ಸಂಬಂಧಿಸಿದಂತೆ 1973-1974 ರಿಂದ 2000-2001 ರ ಒಟ್ಟು 5 ಉತಾರಗಳನ್ನು ಹಾಜರು ಪಡಿಸಿದ್ದು ಅವುಗಳನ್ನೆಲ್ಲಾ ನಿ.ಪಿ-9 ಎಂದು ಗುರುತಿಸಲಾಯಿತು. ಆಸ್ತಿ ನಂ.176 ರ ಇತ್ತೀಚಿನ ಕರ ರಸಿದಿಯನ್ನು ಹಾಜರು ಪಡಿಸಿದ್ದು ಅದನ್ನು ನಿ.ಪಿ-10 ಎಂದು ಗುರುತಿಸಲಾಯಿತು.

ಪಾಟೀ ಸವಾಲು ಶ್ರೀ ಆರ್.ಎಮ್.ವೈ. ವಕೀಲರಿಂದ:-

ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)
ಓ. ಹೇ. ಕೇ. ಸರಿ ಇದೆ.

ಸಹಿ/-
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಲಿಂಗಸಗೂರು.